# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

## ಕೆ.ಆರ್.ನಗರ

## ಸಿ ಮಿಸ್ 466/2022

ಪಿ ಡಬ್ಲ್ಯೂ-1

**ದಿನಾಂಕ 22-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ ಬಿ.ಕೆ.ಎನ್. ಎದುರುದಾರರ ಪರ ವಕೀಲರುಃ**

ನನ್ನ ಮತ್ತು ಎದುರುದಾರರು ನಡುವೆ 17 ವರ್ಷಗಳ ಹಿಂದೆ ದಿಃ 29-11-2009 ರಂದು ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನ ಧರ್ಮಸ್ಥಳದಲ್ಲಿ ಮದುವೆಯಾಗಿರುತ್ತದೆ. ದೇವಸ್ಥಾನದ ಸಮಿತಿಯ ವತಿಯಿಂದ ಎಲ್ಲಾ ರೀತಿಯ ಉಡುಪು, ನಗದು ಮತ್ತು ಮದುವೆಯ ಖರ್ಚು ವೆಚ್ಚಗಳನ್ನು ನೀಡಿ ಮದುವೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನ ಧರ್ಮಸ್ಥಳದಲ್ಲಿ ನಡೆಯುವ ಎಲ್ಲಾ ವಿವಾಹಗಳು ದೇವಸ್ಥಾನದ ಖರ್ಚಿನಲ್ಲಿ ನಡೆಯುತ್ತವೆ ಎಂದರೆ ಸರಿಯಲ್ಲ.

2. ತಕ್ಷಣದಲ್ಲಿ ಮದುವೆ ನಿಗದಿಯಾದ್ದರಿಂದ ನಾವು ಮಾಹಿತಿಯನ್ನು ನೀಡಿಲ್ಲ. ನಿಶ್ಚಿರ್ಥಾತದ ತರುವಾಯ 15 ದಿನಗಳಲ್ಲಿ ಮದುವೆಯಾಗಿರುತ್ತದೆ. ಮದುವೆಗೆ ಆಮಂತ್ರಣ ಪತ್ರಿಕೆಗಳನ್ನು ಸಹ ಮಾಡಿಸಿರುತ್ತೇವೆ. ನಮ್ಮದು ಮೂಲತಃ ತಾಯಿಯ ಮನೆ ಕೆ.ಆರ್. ನಗರ ತಂದೆಯ ಮನೆ ನಂಜನಗೂಡು. ನಾವು ಹಸಿರು ಪಡಿತರ ಚೀಟಿಯನ್ನು ಹೊಂದಿದ್ದೇವೆ ಎಂದರೆ ಸರಿ.

3. ಅದೇ ರೀತಿ ಎದುರುದಾರರ ಮನೆಯವರು ಸಹ ಹಸಿರು ಪಡಿತರ ಚೀಟಿಯನ್ನು ಹೊಂ ದಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಬಡತನ ರೇಖೆಗಿಂತ ಕೆಳಗಿನ ವರ್ಗದ ಜನರಿಗೆ ಹಸಿರು ಪಡಿತರ ಚೀಟಿಯನ್ನು ನೀಡುತ್ತಾರೆ ಎಂದರೆ ಸರಿ. ನಾನು ಎದುರುದಾರರಿಂದ

ಬೇರೆಯಾಗಿ 13 ವರ್ಷಗಳಿಂದ ಕೆ ಆರ್. ನಗರದಲ್ಲಿ ವಾಸವಾಗಿದ್ದೇನೆ. ನಾನು ಆಗಿನಿಂದಲೂ ನನ್ನ ಮಕ್ಕಳು ಪಾಲನೆಯನ್ನು ನಾನೇ ವಹಿಸಿಕೊಂಡಿದ್ದೇನೆ. ಎದುರುದಾರರು ಮನೆಯಲ್ಲಿ ಅವರ ತಾಯಿ ಮತ್ತು ಎದುರುದಾರರು ಇರುತ್ತಾರೆ.

3. ಎದುರುದಾರರು ಅಣ್ಣ ಮೈಸೂರಿನಲ್ಲಿ ವಾಸವಾಗಿದ್ದಾರೆ. ನಮ್ಮ ಅತ್ತೆ ಎದುರುದಾರರ ತಾಯಿಗೆ ವಯಸ್ಸಾಗಿದ್ದು ವಯೋಸಹಜ ಖಾಯಿಲೆಗಳು ಇವೆ ಎಂದರೆ ಸರಿ. ನಮ್ಮ ಅತ್ತೆಗೆ ಪಾಶ್ವವಾಯು ಆಗಿರುತ್ತದೆ ಎಂದರೆ ಸರಿಯಲ್ಲ. ಅವರ ಸಂಪೂರ್ಣ ಪೋಷಣೆಯನ್ನು ಎದುರುದಾರರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ಎದುರುದಾರರ ತಾಯಿ ದೈನಂದಿನ ಕೆಲಸಕಾರ್ಯಗಳನ್ನು ನೊಡೀಕೊಳ್ಳಲು ಆಗುವುದಿಲ್ಲ ಎಂದರೆ ಸರಿಯಲ್ಲ.

4. 2 ನೇ ಅರ್ಜಿದಾರ 10 ನೇ ತರಗತಿ 3 ನೇ ಅರ್ಜಿದಾರಳು 8 ನೇ ತರಗತಿಯಲ್ಲಿ ಕೆ ಆ ಆರ್ ನಗರದ ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಸರ್ಕಾರಿ ಶಾಲೆಯಲ್ಲಿ ಯಾವುದೇ ಶುಲ್ಕವನ್ನು ಪಡೆಯುದಿಲ್ಲ ಎಂದರೆ ಸರಿಯಲ್ಲ. ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳಿಗೆ ಮದ್ಯಾಹ್ನದ ಬಿಸಿ ಊಟ ಮತ್ತು ವಿದ್ಯಾರ್ಥಿ ವೇತನ ಬರುತ್ತಿದೆ ಎಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ಸದರಿ ಮಕ್ಕಳ ವ್ಯಾಸಂಗದ ಶುಲ್ಕದ ರಸೀದಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇಲ್ಲ. ನಾನು ಬೇರೆಯವರ ಮನೆಯಲ್ಲಿ ಕೆಲಸವನ್ನು ಮಾಡುತ್ತೇನೆ.ನಾನು ಪ್ರಸ್ತುತ ನಾಲ್ಕು ಮನೆಯಲ್ಲಿ ಕೆಲಸ ಮಾಡುತ್ತಿದ್ದೇನೆ. 4 ಮನೆಗಳಿಂದ ಒಟ್ಟು 8 ಸಾವಿರ ಹಣವನ್ನು ಗಳಿಸುತ್ತಿದ್ದೇನೆ. ನಾನು 9 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ.

6. ಎದುರುದಾರರ ಮನೆಯಿಂದ ಬಂದಾಗಿನಿಂದಲೂ ಸಹ ನಾನು ಇದೇ ಕೆಲಸನ್ನು ಮಾಡುತ್ತಿದ್ದೇನೆ ಎಂದರೆ ಸರಿ. ಎದುರುದಾರರು ಶಾಮೀಯಾನ ಅಂಗಡಿಯನ್ನುನ ಇಟ್ಟುಕೊಂಡಿರುತ್ತಾರೆ. ಕಲ್ಯಾಣ ಮಂಟಪದ ಉಸ್ತುವಾರಿ ಮತ್ತು ಬಾರ್ ಬೆಂಡಿಂಗ್ ಕೆಲಸವನ್ನು ಮಾಡುತ್ತಾರೆ. ಈ ಕುರಿತು ದಾಖಲೆಗಳನ್ನು ಸಲ್ಲಿಸಲು ತೊಂದರೆ ಇಲ್ಲಾ. ನಮ್ಮ ಅತ್ತೆಗೆ

ವಯಸ್ಸಾಗಿದ್ದ ಕಾರಣ ಎದುರುದಾರರಿಗೆ ಯಾವುದೇ ಕೆಲಸವನ್ನು ವಾಡಲು ಸಾಧ್ಯವಾಗುತ್ತಿಲ್ಲ ಎಂದರೆ ಸರಿಯಲ್ಲ. ಎದುರುದಾರರ ಹೆಸರಿನಲ್ಲಿರುವ ಜಮೀನು ಮತ್ತು ನಿವೇಶದ ದಾಖಲೆಗಳನ್ನು ನೀಡಿರುತ್ತೇನೆ.

7. ಎದುರುದಾರರಿಗೆ ಯಾವುದೇ ಆಸ್ತಿಗಳು ಇಲ್ಲ ಎಂದರೆ ಸರಿಯಲ್ಲ. ಎದರುದಾರರು ನನ್ನನ್ನು ಅವರ ಆರ್ಥಿಕ ಸ್ಥಿತಿಗತಿಗೆ ಅನುಗುಣವಾಗಿ ನೋಡಿಕೊಳ್ಳಲು ತಯಾರಾಗಿದ್ದರೂ ಸಹ ನಾನೇ ಅವರನ್ನು ತೊರೆದು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಲ್ಲಿಗೆ ಹೋದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂಬ ಭಯದಿಂದ ನಮ್ಮ ತಾಯಿ ನನ್ನನ್ನು ಕರೆದುಕೊಂಡು ಬಂದಿರುತ್ತಾರೆ.

8. ಎದುರುದಾರರ ಹಿಂಸೆಯಿಂದ ನಾನು ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಪ್ರಯತ್ನ ಪಟ್ಟಿದ್ದೇನು. ನಾನು ಆಸ್ಪತ್ರೆಗೆ ದಾಖಲಾಗಿ ಯಾವುದೇ ಚಿಕಿತ್ಸೆಯನ್ನು ಪಡೆದಿಲ್ಲ ಆದ್ದರಿಂದ ಯಾವುದೇ ದಾಖಲೆಗಳು ಇರುವುದಿಲ್ಲ. ಎದುರುದಾರರು ತಾಯಿಯನ್ನು ನೋಡಿಕೊಂಡು ಏಕಾಂಗಿ ಜೀವನವನ್ನು ನಡೆಸುತ್ತಿದ್ದಾರೆ ಅದಕ್ಕೆ ನಾನೇ ಕಾರಣ ಎಂದರೆ ಸರಿಯಲ್ಲ. ನಮ್ಮ ತಾಯಿಯನ್ನು ನೋಡಿಕೊಳ್ಳುವ ಉದ್ದೇಶದಿಂದ ನಾನು ಎದುರುದಾರರನ್ನು ತೊರೆದು ಬಂದಿದ್ದೇನೆ ಎಂದರೆ ಸರಿಯಲ್ಲ.

9. ಎದುರುದಾರರ ಹಿಂಸೆಯಿಂದ ನಾನು ಬಂದಿರುತ್ತೇನೆ. ಎದುರುದಾರರು ನನಗೆ ಸರಿಯಾಗಿ ಊಟ ಮತ್ತು ತಿಂಡಿಯನ್ನು ಕೊಡದೆ ಅವ್ಯಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದರು. ಎದುರುದಾರರ ತಾಯಿಯ ಮಾತನ್ನು ಕೇಳಿ ಜಗಳವಾಡುವುದನ್ನು ಬಿಟ್ಟರೆ ಬೇರೆಯಾವುದೇ ಭಿನ್ನಾಭಿಪ್ರಾಯ ಇರುವುದಿಲ್ಲ. ನಾನು ಎದುರುದಾರರ ವಿರುದ್ಧ ದೂರನ್ನು ದಾಖಲು ಮಾಡಿದ್ದೇನೆ.

10. ನನ್ನ ಮತ್ತು ಎದುರುದಾರರ ತಾಯಿಯ ನಡುವೆ ಜಗಳಗಳಾಗಿತ್ತಿದ್ದವು ಎಂದರೆಸ ರಿ. ಸಾಕ್ಷಿ ಮುಂದುವರೆದು ಎದುರುದಾರರ ತಾಯಿಯೇ ನನ್ನನ್ನು ಬೈಯುತ್ತಿದ್ದರು ಎಂದು

ತಿಳಿಸಿರುತ್ತಾರೆ. ಸದರಿ ಭಿನ್ನತೆಯಿಂದ ನಾನು ಎದುರುದಾರರನ್ನು ತೊರೆದು ನಮ್ಮ ತಾಯಿಯ ಮನೆಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ.  ನಾನೇ ಎದುರುದಾರರ ಮನೆಯನ್ನು ತೊರೆದು ಬಂದ ಕಾರಣ ನನಗೆ ಜೀವನಾಂಶವನ್ನು ಪಡೆಯುವ ಅರ್ಹತೆ ಇಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಅರ್ಜಿದಾರರ  ಪ್ರೀತಿಯನ್ನು ಎದುರುದಾರರಿಗೆ ಸಿಗದಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ  ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದರಿಂದ ಕಾಲಾವಕಾಶವನ್ನು  ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ